# ಯಮರೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಯಮರೆ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562125

ಕ್ರ.ಸಂಖ್ಯೆ: ಗ್ರಾ.ಪಂ/ಯಮರೆ/26/2025–26

ದಿನಾಂಕ : ದಿನಾಂಕ 21/05/2025

## ನಿರಾಪೇಕ್ಷಣಾ ಪತ್ರ

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಯಮರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿ ಹೊಸಹಳ್ಳಿ ಗ್ರಾಮದ ಸರ್ವೇ ನಂ 110/1 ರಲ್ಲಿ 2 ಎಕರೆ 0 ಗುಂಟೆ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನೆ ಆದೇಶ ಸಂಖ್ಯೆ ALN (ASH) SR 467/2024–25 ದಿನಾಂಕ 20/03/2025 ರಂತೆ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆ, ಸದರಿ ಜಮೀನಿನಲ್ಲಿ **ಮೆ. ಬೈನರಿ ವೆಂಚರ್ಸ್ ರವರು** ವಸತಿ ಸಮುಚ್ಚಯ ನಿರ್ಮಿಸಲು ಉದ್ದೇಶಿಸಿರುತ್ತಾರೆ,

ಸದರಿಯವರು ಉದ್ದೇಶಿಸಿರುವ ವಸತಿ ಸಮುಚ್ಚಯ ಯೋಜನೆಯಲ್ಲಿ ಸದರಿಯವರು ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ಗ್ರಾಮ ಪಂಚಾಯತಿ ವತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ. ಸದರಿ ಜಮೀನಿಗೆ 40 ಅಡಿಗಳ ರಸ್ತೆ ಸಂಪರ್ಕವು ಸಹ ಇರುತ್ತದೆ.

ಸಕ್ಷಮ ಪ್ರಾಧಿಕಾರದ ಅನುಮೋದಿತ ನಕ್ಷೆಯಂತೆ ಉದ್ದೇಶಿತ ವಸತಿ ಸಮುಚ್ಚಯ ಕಾಮಗಾರಿಗಳು ಪೂರ್ಣಗೊಂಡ ನಂತರ ಗ್ರಾಮ ಪಂಚಾಯತಿಗೆ ಕಟ್ಟಬೇಕಾದ ವಿವಿಧ ತೆರಿಗೆಗಳನ್ನು ಹಾಗೂ ಕುಡಿಯುವ ನೀರಿಗೆ ಸಂಬಂದಪಟ್ಟಂತಹ ಹಣವನ್ನು ಸಂದಾಯ ಮಾಡಿದ ನಂತರ ಅವಶ್ಯವಿದಲ್ಲಿ ಈಗಿರುವ ನೀರಿನ ಮೂಲಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದೆಂದು ಈ ಮೂಲಕ ದೃಡೀಕರಿಸುತ್ತೇವೆ. ಕುಡಿಯುವ ನೀರಿನ ಸಮಸ್ಯಗಳು ಉದ್ಭವಿಸಿದಲ್ಲಿ ಸರಬರಾಜಿನಲ್ಲಿ ವ್ಯತ್ಯಾಸ ಹಾಗೂ ಸಂಪೂರ್ಣ ಸ್ಥಗಿತಗೊಳಿಸಲಾಗುವುದೆಂದು ಕೂಡ ತಿಳಿಯತಕ್ಕದು.

ಈ ವಸತಿ ಸಮುಚ್ಚಯಕ್ಕೆ ಕುಡಿಯುವ ನೀರಿನ ಸಂಪರ್ಕ ನೀಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಈ ಮೂಲಕ ಸಂಬಂಧಪಟ್ಟವರಿಗೆ ನಿರಾಪೇಕ್ಷಣಾ ಪತ್ರವನ್ನು ನೀಡಲಾಗಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಯಮರೆ ಗ್ರಾಮ ಪಂಚಾಯಿತಿ
ಆನೇಕಲ್ ತಾಲ್ಲೂಕು